INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,24- 35
Peer -Reviewed, Refereed Journal

# ಮಧ್ಯಯುಗದ ತುಳುನಾಡಿನ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಊಳಿಗಮಾನ್ಯ ಪದ್ದತಿ–ಒಂದು ಅವಲೋಕನ

**ಡಾ.ಚಂದ್ರಕಾಂತ ಭಟ್.**[1]

**ಅಮೂರ್ತ:** ಪ್ರಸ್ತುತ ಅಧ್ಯಯನವು ರಾಜಕೀಯ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತದ ಜೊತೆಗೆ ತುಳುನಾಡಿನ ಗ್ರಾಮೀಣ ಸಮಾಜದ ವಿಕಸನ ಮತ್ತು ವಿಶಿಷ್ಟತೆಯನ್ನು ಒತ್ತಿ ಹೇಳುತ್ತದೆ. ಹೊಯ್ಸಳ, ವಿಜಯನಗರ ಮುಂತಾದ ಸಾಮ್ರಾಜ್ಯಶಾಹಿ ಸಾಮ್ರಾಜ್ಯಗಳು ತುಳುನಾಡಿನ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು. ಈ ಅವಧಿಯಲ್ಲಿ ಅಳುಪ, ಭಂಗ, ಭೈರರಸ ಚೌಟ ಮುಂತಾದ ಸಣ್ಣ ಸಣ್ಣ ರಾಜವಂಶಗಳು ತುಳುನಾಡನ್ನು ಆಳಿದವು. ಇಂಪೀರಿಯಲ್ ಮತ್ತು ಮೈನರ್ ರಾಜವಂಶಗಳ ನಡುವಿನ ಸಂಬಂಧವು ಊಳಿಗಮಾನ್ಯ ಸ್ವರೂಪವನ್ನು ಪಡೆದುಕೊಂಡಿತ್ತು. ಪ್ರಸ್ತುತ ಅಧ್ಯಯನವು ತುಳುನಾಡಿನ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಪ್ರಬಲ ಮತ್ತು ಅಧೀನ ಪಾತ್ರ, ಪ್ರಭು ಮತ್ತು ಸಾಮಂತ ಎನ್ನುವ ರೀತಿಯ ಆಡಳಿತವನ್ನು ಕಾಣಬಹುದು. ಈ ಸ್ಪರ್ಧೆಯಲ್ಲಿ ಎರಡು ರೀತಿಯ ಆಡಳಿತವನ್ನು ಕಾಣಬಹುದು. ಮೊದಲನೆಯದು ಸ್ಥಳೀಯ ಆಡಳಿತ, ಇದು ಸ್ಥಳೀಯ ಜಾನಪದ, ಸಂಪ್ರದಾಯ, ಆಚರಣೆ ಭಾಷಾ ಸಾಹಿತ್ಯ ಇತ್ಯಾದಿಗಳನ್ನು ಬಳಸಿಕೊಂಡು ರೂಪುಗೊಂಡಿದೆ. ಎರಡನೆಯದು ಸಾಮ್ರಾಜ್ಯಶಾಹಿ ಶಕ್ತಿಗಳ ವಿಸ್ತರಣೆಯಿಂದ ರಚಿಸಿದವು.

**ಕೀ ವರ್ಡ್ಸ್** : ಮಹಾಮಂಡಲೇಶ್ವರರು, ಮಹಾಸಾಮಂತರು, ವರ್ತಕಶ್ರೇಣಿಗಳು, ಪಟ್ಟಣಶೆಟ್ಟಿ, ಪಟ್ಟಣಸ್ವಾಮಿ, ನಗರತ್ತರ್, ಊಳಿಗಮಾನ್ಯ, ನಾಡು, ಹೆಗ್ಗಡೆ, ಬ್ರಾಹ್ಮಣರು, ಅಗ್ರಹಾರ, ಚಾವಡಿ, ದೇವಾದಾಯ, ಬ್ರಹ್ಮದಾಯ, ದತ್ತಿ.ಮುಂತಾದವು.

---

[1]**.ಸಹ ಪ್ರಾಧ್ಯಾಪಕರು, ಶ್ರೀ.ಪೂರ್ಣ ಪ್ರಜ್ಞಾ ಸಂಧ್ಯಾ ಕಾಲೇಜು,ಉಡುಪಿ.**

ಪಶ್ಚಿಮ ಘಟ್ಟಗಳಿಂದಾಗಿ ತುಳುನಾಡು ಕರ್ನಾಟಕದ ಇತರ ಭೂಭಾಗಗಳಿಂದ ಬಹಳ ಕಾಲ ಪ್ರತ್ಯೇಕವಾಗಿಯೇ ಇದ್ದುದರಿಂದ ಇದು ತನ್ನದೇ ಆದ ಸಂಸ್ಕೃತಿ, ನಡೆನುಡಿ, ಆಚಾರ–ವಿಚಾರಗಳನ್ನು ಕಂಡು ಕೊಳ್ಳುವಂತಾಗಿದೆ. ತುಳುನಾಡಿನ ಇತಿಹಾಸದುದ್ದಕ್ಕೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿರುವ ಶ್ರೇಣೀಕೃತ ಸಮಾಜ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಕಾಣಬಹುದು. ಕೇಂದ್ರಾಡಳಿತದಲ್ಲಿ ಸಾರ್ವಭೌಮರಾದ ಚಕ್ರವರ್ತಿಗಳು ಅಥವಾ ರಾಜ ಮಹಾರಾಜರಿದ್ದರೆ ಪ್ರಾಂತ್ಯಾಡಳಿತದಲ್ಲಿ ಮಹಾಮಂಡಲೇಶ್ವರರು, ಮಹಾಸಾಮಂತರು, ನಾಡ ಆಡಳಿತದಲ್ಲಿ ನಾಡಪ್ರಭು, ಪಟ್ಟಣ ನಗರಗಳಾದರೆ ವರ್ತಕಶ್ರೇಣಿಗಳು, ಪಟ್ಟಣಶೆಟ್ಟಿ, ಪಟ್ಟಣಸ್ವಾಮಿ, ನಗರತ್ತರ್, ಅಗ್ರಹಾರಗಳಾದರೆ ಮಹಾಜನರು; ಗ್ರಾಮಗಳಾದರೆ ಪ್ರಭುಗಾವುಂಡರು, ಗಾವುಂಡರು ಆಳ್ವಿಕೆ ನಡೆಸುತ್ತಿದ್ದರು. ತುಳುನಾಡಿನ ಊರಾಡಳಿತದಲ್ಲಿ ಗುತ್ತಿನ ಮನೆಗಳು ಆಡಳಿತದ ಮೂಲ ಘಟಕವಾಗಿದ್ದವು. ಇದರಿಂದ ಪ್ರಾಂತ್ಯಗಳು ಮತ್ತು ನಾಡುಗಳು ಕೇಂದ್ರದ ಅಧೀನದಲ್ಲಿ ಉಳಿಯುವುದರೊಂದಿಗೆ ರಾಜರು ಅವುಗಳ ನೇರ ಸಂಬಂಧವನ್ನು ಪಡೆದಿರುತ್ತಿದ್ದರು. ಹೀಗಾಗಿ ತುಳು ರಾಜ್ಯದಲ್ಲಿ ಶ್ರೇಣೀಕೃತ ಆಡಳಿತ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದಿತೆಂದು ಹೇಳಬಹುದು.

ಪ್ರಭುತ್ವ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಿದ್ದಂತೆಲ್ಲಾ ಹೊಸ ಹೊಸ ಭೂ ಪ್ರದೇಶಗಳು ರಾಜ್ಯದೊಳಗೆ ಸೇರ್ಪಡೆಗೊಳ್ಳುತ್ತಾ ಹೋದವು. ಇದರಿಂದಾಗಿ ನೇರ ಆಡಳಿತ ಎನ್ನುವುದು ಸಾಧ್ಯವಾಗದೆ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹುಟ್ಟುಹಾಕಿತು. ಇದರಿಂದ ಸಾಮಂತ ಅಥವಾ ಸ್ಥಳೀಯ ಅರಸರು ತಮ್ಮ ಸಾಮ್ರಾಟರಿಗೆ ವಿಧೇಯರಾಗಿರುತ್ತಿದ್ದರು ಹಾಗೂ ಅದೇ ಸಂದರ್ಭದಲ್ಲಿ ತಮ್ಮದೇ ಆದ ಆಡಳಿತವಲಯಗಳನ್ನೂ ಹೊಂದಿರುತ್ತಿದ್ದರು. ಈ ಬಗೆಯ ಆಡಳಿತ ವ್ಯವಸ್ಥೆಯನ್ನು ಊಳಿಗಮಾನ್ಯ ವ್ಯವಸ್ಥೆ ಎಂಬುದಾಗಿಯೂ ಕರೆಯಲಾಗಿದೆ.

ರಾಜ್ಯ ಹಾಗೂ ಸಾಮ್ರಾಜ್ಯಗಳು ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿಯೇ ಸಾಮಂತ ಅರಸು ಮನೆತನಗಳೂ ಅಸ್ತಿತ್ವದಲ್ಲಿದ್ದವು. ಸಣ್ಣಪುಟ್ಟ ಅರಸು ಮನೆತನಗಳು ಒಂದಷ್ಟು ಭೂಭಾಗವನ್ನು ಹೊಂದಿದ್ದು, ಅದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದವು. ಇಲ್ಲಿ ಎರಡು ಬಗೆಯ ಆಡಳಿತ ಕ್ರಮವನ್ನು ನೋಡಬಹುದಾಗಿದೆ. ಒಂದನೇಯದು ಸ್ಥಳಿಯ ಆಡಳಿತ ಕ್ರಮ. ಇದು ಸ್ಥಳೀಯವಾಗಿ ರೂಪುಗೊಂಡಿರುತ್ತದೆ. ಇಲ್ಲಿ ಆಡಳಿತ ಎನ್ನುವುದು ಒಂದು ಸಾಮಾಜಿಕ ವ್ಯವಸ್ಥೆಯಾಗಿ ಹಾಗೂ ಅಲ್ಲಿನ ಭೌಗೋಳಿಕತೆ, ಜನಜೀವನ, ಸಂಪ್ರದಾಯ, ಆಚರಣೆ, ಭಾಷೆ, ಸಾಹಿತ್ಯ ಮುಂತಾದವುಗಳೊಂದಿಗೆ ಬೆಸೆದುಕೊಂಡಿರುತ್ತದೆ. ಆಯಾಪ್ರದೇಶದ ಭಾಷೆ ಆಡಳಿತದಲ್ಲಿ ಪ್ರಧಾನವಾಗಿರುತ್ತದೆ. ಎರಡನೆಯದು ತುಳುನಾಡಿನ ಪ್ರದೇಶಗಳನ್ನು ಗೆದ್ದು ಅಧಿಕಾರ ಸ್ಥಾಪಿಸಿದ ಹೊರಗಿನ ಶಕ್ತಿಗಳ ಆಡಳಿತ ಕ್ರಮ. ಇದು

ಹೇರಿಕೆಯರೂಪದ ಆಡಳಿತ ಕ್ರಮವಾಗಿದ್ದು, ಇಡೀ ರಾಜ್ಯಕ್ಕೆ ಏಕರೂಪದ್ದಾಗಿರುತ್ತದೆ. ಆದುದರಿಂದ ಪ್ರಭುತ್ವದ ಆಡಳಿತವು ಸ್ಥಳೀಯ ಆಡಳಿತ ವ್ಯವಸ್ಥೆಯೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಲೇಬೇಕಾಗಿತ್ತು. ಸ್ಥಳೀಯ ಆಡಳಿತ ವಿಧಾನಗಳನ್ನು ಉಳಿಸಿಕೊಳ್ಳುವುದು ಕೇಂದ್ರಾಡಳಿತದ ಅಸ್ತಿತ್ವದ ಹಿನ್ನೆಲೆಯಿಂದಲೂ ಮುಖ್ಯವಾಗಿತ್ತು. ಏಕೆಂದರೆ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳಲು ತಮ್ಮ ಅಥವಾ ಸ್ಥಳೀಯ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಉದಾಹರಣೆಯಾಗಿ ಹೇಳುವುದಾದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ಮಂಗಳೂರು ಹಾಗೂ ಬಾರ್ಕೂರು ಪ್ರದೇಶಗಳನ್ನು ಮಂಗಳೂರು ರಾಜ್ಯ ಹಾಗೂ ಬಾರ್ಕೂರು ರಾಜ್ಯಗಳಾಗಿ ಮಾಡಿ ರಾಜ್ಯಪಾಲರುಗಳನ್ನು ನೇಮಕ ಮಾಡಲಾಗಿತ್ತು. ಇವರು ವಿಜಯನಗರ ಸಾಮ್ರಾಟರ ಪ್ರತಿನಿಧಿಗಳಾಗಿ ಆಡಳಿತ ನಡೆಸುತ್ತಿದ್ದರು. ವಿಜಯನಗರ ಮಾದರಿಯ ಆಡಳಿತ ಕ್ರಮಜಾರಿಗೊಂಡರೂ ಸ್ಥಳೀಯ ಆಡಳಿತ ಘಟಕಗಳಾದ ಸೀಮೆ, ಮಾಗಣೆ, ಗ್ರಾಮ, ಗುತ್ತುಗಳಿಗೆ ಸಂಬಂಧಿಸಿದ ಆಡಳಿತ ವಿಧಾನಗಳು ತುಳುನಾಡಿನಲ್ಲಿ ಕಣ್ಮರೆಯಾಗಲಿಲ್ಲ. ಸ್ಥಳೀಯ ಅರಸು ಮನೆತನಗಳು ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ ತಮ್ಮ ಪ್ರಭುಗಳಿಗೆ ಕಪ್ಪಕಾಣಿಕೆಗಳನ್ನು ಹಾಗೂ ಅಗತ್ಯ ಬಿದ್ದಾಗ ಸೈನಿಕ ನೆರವನ್ನೂ ನೀಡಬೇಕಾಗಿತ್ತು.

**ಹಿನ್ನೆಲೆ** : ಊಳಿಗಮಾನ್ಯ ಆಡಳಿತ ಪದ್ಧತಿಯು ಒಂದು ಪರಿಕಲ್ಪನೆಯಾಗಿ ಮೊದಲಿಗೆ ಪರಿಚಯವಾದದ್ದು ಯುರೋಪ್‌ನಲ್ಲಿ. ಭಾರತದ ಸಂದರ್ಭಕ್ಕೆ ಅನ್ವಯಿಸಿ ಮೊತ್ತಮೊದಲಿಗೆ ಮಾತನಾಡಿದ ಇತಿಹಾಸಕಾರ ಡಿ.ಡಿ.ಕೊಸಾಂಬಿಯವರು ತಮ್ಮ 'ಏನ್‌ಇಂಟ್ರೊಡಕ್ಷನ್ ಟು ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟರಿ' ಎಂಬ ಶ್ರೇಷ್ಠ ಕೃತಿಯಲ್ಲಿ ಪ್ರಾಚೀನ ಭಾರತೀಯ ಇತಿಹಾಸದ ಮರು ನಿರೂಪಣೆಯಲ್ಲಿ ಊಳಿಗಮಾನ್ಯ ರಚನೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ ಊಳಿಗಮಾನ್ಯ ವ್ಯವಸ್ಥೆಯು ಭೂಹಿಡುವಳಿ ಪದ್ಧತಿಯ ಅನುಸರಿಸುವಿಕೆಯಾಗಿದ್ದು, ರೈತರಲ್ಲಿರುವ ಸಂಪತ್ತಿನ ಸೂರೆಗೆ ಕಾರಣವಾಗಿದ್ದು ಭಾರತದ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ರಾಜ ಮತ್ತು ಪ್ರಜೆಗಳ ನಡುವೆ ಅನೇಕ ಮಧ್ಯವರ್ತಿಗಳು ಭಾಗವಹಿಸಿ ಅಧಿಕಾರ ಚಲಾಯಿಸುತ್ತಿದ್ದರು. ಇವರು ರೈತರ ಮೇಲೆ ಅಧಿಕಾರ ಚಲಾಯಿಸಿ ಹೆಚ್ಚಿನ ಭೂಕಂದಾಯವನ್ನು ವಸೂಲಿ ಮಾಡುತ್ತಾ ಅವರ ದುಡಿಮೆಯನ್ನು ಬಳಸಿಕೊಳ್ಳುತ್ತಿದ್ದರು ಎಂದು ಕೊಸಾಂಬಿಯವರು ಅಭಿಪ್ರಾಯಿಸಿದ್ದಾರೆ. ಆ ಮೂಲಕ ರೈತರು ಶೋಷಣೆಗೆ ಒಳಗಾಗುತ್ತಿದ್ದರಲ್ಲದೆ ಬ್ರಾಹ್ಮಣರು ಮಾತ್ರ ಈ ಶೋಷಣೆಯಿಂದ ಅಥವಾ ಕಂದಾಯ ಪಾವತಿಸುವುದರಿಂದ ವಿನಾಯಿತಿಯನ್ನು ಹೊಂದಿದ್ದರು. ಹಾಗಾಗಿ ಸಮಾಜ ಶ್ರೇಣೀಕೃತವಾದುದಲ್ಲದೆ ಆಸ್ತಿ ಮತ್ತು ಸಂಪತ್ತು ಹಂಚುವಿಕೆಯಲ್ಲಿನ ಅಸಮತೋಲನವು ಸ್ಪಷ್ಟವಾಗಿ ಭಾರತದ ಸಮಾಜದಲ್ಲಿ ಕಾಣುತ್ತಿತ್ತು ಎಂದು ವಾದಿಸಿದ್ದಾರೆ.

ಆರ್.ಎಸ್.ಶರ್ಮಾರವರು ಇನ್ನೊಬ್ಬ ಪ್ರಖ್ಯಾತ ಇತಿಹಾಸಕಾರರಾಗಿದ್ದು, ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ವಿಸ್ತೃತ ಅಧ್ಯಯನ ಮಾಡಿದ್ದಾರೆ. ಅವರು ತಮ್ಮ 'ಫ್ಯೂಡಲಿಸಮ್ ಇನ್ ಇಂಡಿಯಾ' ಎಂಬ ಉತ್ಕೃಷ್ಟ ಗ್ರಂಥದಲ್ಲಿ ಭಾರತೀಯ ಊಳಿಗಮಾನ್ಯ ವ್ಯವಸ್ಥೆಯು ಯುರೋಪಿನ ಊಳಿಗಮಾನ್ಯ ವ್ಯವಸ್ಥೆಗಿಂತ ಭಿನ್ನವಾದುದಾಗಿದ್ದು; ಭಾರತದಲ್ಲಿ ಮೌರ್ಯರ ಕಾಲದ ನಂತರ ಅದರಲ್ಲೂ ಮುಖ್ಯವಾಗಿ ಗುಪ್ತಯುಗ ಅಂತ್ಯವಾದ ಮೇಲೆ ಕೆಲವು ನಿರ್ದಿಷ್ಟವಾದ ರಾಜಕೀಯ ಮತ್ತು ಆಡಳಿತ ಕುಸಿತದ ಕಾರಣದಿಂದ ಪ್ರಭುತ್ವ ಅನುಭವಿಸಿದ ಅಧಿಕಾರದಲ್ಲಿ ಊಳಿಗಮಾನ್ಯ ಲಕ್ಷಣಗಳು ಪ್ರಕಟವಾದವೆಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಊಳಿಗಮಾನ್ಯದ ಉಗಮಕ್ಕೆ ಈ ಕಾಲ ಘಟ್ಟದಲ್ಲಿ 1. ಬ್ರಾಹ್ಮಣರಿಗೆ ದೊಡ್ಡ ಪ್ರಮಾಣದಲ್ಲಿ ಬ್ರಹ್ಮಾದಾಯ ಕೊಡಮಾಡಿದ ಭೂದಾನ ಸಂಪ್ರದಾಯ 2. ಸೈನಿಕ ಮತು ್ತಆಡಳಿತಾತ್ಮಕ ಸೇವೆ ಒದಗಿಸಿದ ಸೇನಾಧಿಕಾರಿಗಳಿಗೆ ನೀಡಲಾದ ಭೂದಾನ ಮತ್ತು 3.ಅಗ್ರಹಾರಗಳು ವಹಿಸಿಕೊಂಡ ಅಧಿಕಾರ ಹಂಚಿಕೆಯು ಕೂಡ ಸಾಮ್ರಾಟನ ಅಧಿಕಾರ ದುರ್ಬಲವಾಗಲು ಪ್ರಮುಖ ಕಾರಣಗಳೆಂದು ಶರ್ಮಾ ಅವರು ವಾದಿಸುತ್ತಾರೆ. ರೈತರು ಮತ್ತು ಗುಲಾಮರ ಸೇವೆಯು ಈ ಬಗೆಯ ಮಧ್ಯವರ್ತಿಗಳಿಗಾಗಿ ಮೀಸಲಿಡುವ ಸಂಪ್ರದಾಯವು ಸಹ ನಿಧಾನವಾಗಿ ಬೆಳೆಯಿತು. ಹೀಗೆ ಉಗಮವಾದ ಹೊಸ ಭೂಮಾಲೀಕ ವರ್ಗವು ಆಡಳಿತ ಮತ್ತು ನ್ಯಾಯಾಂಗ ಕ್ಷೇತ್ರಗಳಲ್ಲಿ ಅಧಿಕಾರವನ್ನು ಅನುಭವಿಸತೊಡಗಿದವು. ಇವು ಭಾರತೀಯ ಊಳಿಗಮಾನ್ಯದ ಪ್ರಮುಖ ಲಕ್ಷಣಗಳೆಂದು ಶರ್ಮಾರವರು ಗ್ರಹಿಸುತ್ತಾರೆ. ಇಲ್ಲಿ ಭೂದಾನದ ಜೊತೆಗೆ ಅದಕ್ಕೆ ಹೊಂದಿ ಕೊಂಡಿರುವ ರೈತರು, ಜೀತಗಾರರು, ಕರಕುಶಲಕರ್ಮಿಗಳನ್ನು ದಾನ ಸ್ವೀಕರಿಸುವವನು ಸಮಗ್ರವಾಗಿ ಪಡೆಯುವ ಹಕ್ಕು ಇರುತ್ತಿತ್ತಲ್ಲದೆ, ಈ ಎಲ್ಲಾ ಸಮುದಾಯಗಳು ಆ ಮಾಲೀಕನನ್ನು ತ್ಯಜಿಸುವುದು ಅಸಾಧ್ಯವಾದ ವ್ಯವಸ್ಥೆಯಾಗಿತ್ತು.

ದಕ್ಷಿಣ ಭಾರತದಲ್ಲಿ ಊಳಿಗಮಾನ್ಯ ಸಂಪ್ರದಾಯದ ಉಗಮ ಮತ್ತು ವಿಕಾಸದಕುರಿತು ಟಿ.ವಿ. ಮಹಾಲಿಂಗಂರವರು ಅಧ್ಯಯನ ಮಾಡಿದ್ದು, ಅವರು ವಿಜಯನಗರ ಕಾಲವನ್ನು ಅನುಲಕ್ಷಿಸಿ ಊಳಿಗಮಾನ್ಯ ಲಕ್ಷಣಗಳನ್ನು ಚರ್ಚಿಸಿದ್ದಾರೆ. ಅವರ ಪ್ರಕಾರ ಊಳಿಗಮಾನ್ಯದಡಿಯಲ್ಲಿ ಇಡೀ ಸಮಾಜದ ರಚನೆಯು ಭೂಹಿಡುವಳಿ ಪದ್ಧತಿಯನ್ನು ಅವಲಂಭಿತವಾಗಿತ್ತು. ಈ ಪದ್ಧತಿಯಂತೆ ರಾಜನಿಂದ ಕೆಳಹಂತದ ಭೂಮಾಲೀಕನವರೆಗೂ ತಮ್ಮ ಸೇವೆಯನ್ನು ತಮಗಿಂತ ಮೇಲಿದ್ದವರಿಗೆ ಮೀಸಲಿಡುವ ಸಂಪ್ರದಾಯವಿತ್ತು. ಸಾಮ್ರಾಟನು ತನ್ನ ಅಧೀನದಲ್ಲಿರುವ ಸಾಮಂತನ ರಕ್ಷಣೆ ಮಾಡಬೇಕು. ಸಾಮಂತನು ಸಾಮ್ರಾಟನ ರಕ್ಷಣೆಯಲ್ಲಿ ಪಾಲ್ಗೊಳ್ಳಬೇಕು. ಈ ರಕ್ಷಣೆ ಮತ್ತು ಸೇವೆಯು ಅವರು ಹೊಂದಿರುವ ಭೂಒಡೆತನವನ್ನು ಅವಲಂಭಿಸಿರುತ್ತಿತ್ತು. ಇಲ್ಲಿಎರಡು ಲಕ್ಷಣಗಳನ್ನು ಅವರು ಗುರುತಿಸುತ್ತಾರೆ. 1. ರಾಜಕೀಯ ಲಕ್ಷಣ. 2. ಆರ್ಥಿಕ ಲಕ್ಷಣ. ರಾಜಕೀಯವಾಗಿ ಸಾಮಂತನು ತನ್ನ ಸಾಮ್ರಾಟನು ನೀಡಿರುವ

ಗ್ರಾಮಗಳ ಒಡೆತನದೊಂದಿಗೆ ಆ ಗ್ರಾಮಗಳ ಆಡಳಿತದ ಹಕ್ಕನ್ನು ಪಡೆಯುವುದರ ಜೊತೆಗೆ ತನ್ನ ಪ್ರಭುವಿಗೆ ವಿಧೇಯನಾಗಿ ಅವನ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದನು. ಇದಕ್ಕೆ ಪೂರಕವಾಗಿ ಪ್ರಭುವು ತನ್ನ ಸಾಮಂತನನು ್ನರಕ್ಷಿಸುವ ಸಂಪ್ರದಾಯ ಇತ್ತು. ಆರ್ಥಿಕವಾಗಿ ಗ್ರಾಮ ಮಟ್ಟದಲ್ಲಿರುವ ಸಾಮಂತನ ಪ್ರಭಾವವು ಅವನು ಹೊಂದಿರುವ ಭೂಒಡೆತನವನ್ನು ಅವಲಂಭಿಸಿಕೊಂಡಿರುತ್ತಿತ್ತು.

ಹೀಗೆ ಕೋಸಾಂಬಿ, ಆರ್.ಎಸ್.ಶರ್ಮಾ, ಟಿ.ವಿ.ಮಹಾಲಿಂಗಂ, ವ್ಯಾಖ್ಯಾನಿಸಿದ ಊಳಿಗಮಾನ್ಯ ಸಂಪ್ರದಾಯವು ತುಳುನಾಡಿನ ಚರಿತ್ರೆಯಲ್ಲಿಯೂ ಗಮನಿಸಲು ಸಾಧ್ಯವಾಗುತ್ತದೆ. ತುಳುನಾಡಿನ ಅನೇಕ ಸ್ಥಳೀಯ ರಾಜಮನೆತನಗಳು ಸಾಮ್ರಾಟರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಸ್ಥಳೀಯಾಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ದೇವಾಲಯಗಳು, ಮಠಗಳು ಮತು ್ತಧಾರ್ಮಿಕ ಕೇಂದ್ರಗಳು ಅಪಾರ ಪ್ರಮಾಣದ ಭೂಒಡೆತನದ ಜೊತೆಗೆ ಸಮಾಜದ ಮುಖ್ಯವಾಹಿನಿಯಲ್ಲಿ ಶ್ರೀಮಂತ ಹಾಗೂ ಪ್ರಭಾವಿ ಶಕ್ತಿಗಳಾಗಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದವು. ಇವರು ರಾಜನೊಂದಿಗೆ ಅನ್ಯೋನತೆಯಿಂದ ಇದ್ದು, ಇವರ ನೆಲೆಗಳು ರಾಜಧಾನಿಗಳಂತೆ ಸ್ಥಳೀಯ ಅಧಿಕಾರ ಕೇಂದ್ರಗಳಾಗಿ ಪರಿವರ್ತನೆಗೊಂಡಿದ್ದವು. ಸೂಕ್ಷ್ಮವಾಗಿ ಗಮನಿಸಿದರೆ ಈ ಕಾಲಘಟ್ಟದ ಸಮಾಜ ಮತು ್ತರಾಜಕೀಯ ರಚನೆಯು ಊಳಿಗಮಾನ್ಯ ಘಟಕಗಳಿಗೆ ಹೋಲಿಕೆ ಆಗುತ್ತದೆ. ಏಕೆಂದರೆ ಇಲ್ಲಿ ವಿಕಾಸಗೊಂಡಿರುವ ಆಡಳಿತ ರಚನೆಯಲ್ಲಿ ಅಧಿಕಾರವು ಒಬ್ಬ ವ್ಯಕ್ತಿಯನ್ನು ಕೇಂದ್ರೀಕರಿಸಿ ಕೊಂಡಿರಲಿಲ್ಲ. ಬದಲಾಗಿ ಬೇರೆ ಬೇರೆ ಹಂತಗಳಲ್ಲಿ ಹಂಚಿಕೆಯಾಗಿದ್ದವು. ಅಂದರೆ ಅಧಿಕಾರವು ಕೇಂದ್ರಾಡಳಿತ ಮತ್ತು ಅದನ್ನು ನಿಯಂತ್ರಿಸುವ ವ್ಯಕ್ತಿ ಅಥವಾ ಸಂಸ್ಥೆಗೆ ಸೀಮಿತವಾಗಿರಲಿಲ್ಲ. ತುಳುನಾಡಿನ ಸಂದರ್ಭದಲ್ಲಿ ಕೇಂದ್ರದಿಂದ ಗ್ರಾಮ ಮಟ್ಟದವರೆಗೂ ಅಧಿಕಾರವನ್ನು ವಿವಿಧ ವ್ಯಕ್ತಿಗಳು ಮತ್ತು ಸಂಸ್ಥೆಗಳು ವಹಿಸಿಕೊಂಡು ಇಲ್ಲಿನ ಆಡಳಿತವನ್ನು ಕ್ರಮಬದ್ಧಗೊಳಿಸಿರುವುದು ಕಂಡುಬರುತ್ತದೆ. ಒಂದರ್ಥದಲ್ಲಿ ಇದು ಊಳಿಗಮಾನ್ಯ ಆಡಳಿತ ರಚನೆ ಎಂದೇ ಗ್ರಹಿಸಬಹುದು.

ಆಡಳಿತದ ವಿಕೇಂದ್ರೀಕರಣವನ್ನು ಹೊಸ ರಾಜಕೀಯ ಶಕ್ತಿಗಳ ಹುಟ್ಟು ಅಥವಾ ರಾಜ್ಯದ ವಿಘಟನೆ ಎಂಬರ್ಥದಲ್ಲಿ ನೋಡಬಹುದು. ಊಳಿಗಮಾನ್ಯ ವ್ಯವಸ್ಥೆಯನ್ನು ಆಡಳಿತದ ವಿಕೇಂದ್ರೀಕರಣ ಹಾಗೂ ಸ್ಥಳೀಯ ಆಡಳಿತ ವ್ಯವಸ್ಥೆಗಳನ್ನು ಒಳಗೊಳ್ಳುವ ಪ್ರಕ್ರಿಯೆಯನ್ನಾಗಿಯೂ ಪರಿಗಣಿಸಬಹುದು. ಪ್ರಾಂತ್ಯಗಳು ಅಥವಾ ರಾಜ್ಯಗಳನ್ನು ಪುನಃ ಉಪ ವಿಭಾಗಗಳನ್ನಾಗಿ ಮಾಡಿ 'ನಾಡು'ಗಳೆಂದು ಕರೆಯಲಾಗುತ್ತಿತ್ತು. ಉದಾಹರಣೆಗೆ ಆಳುಪ ರಾಜ್ಯವನ್ನು ಆರಂಭದಿಂದಲೂ 'ನಾಡು'ಗಳೆಂದು ವಿಭಜನೆ ಮಾಡಲಾಗಿತ್ತು. ಕುಂದಾಪುರ ತಾಲೂಕಿನ ಬೈಂದೂರು ಪ್ರಾಂತವನ್ನು ಬೈಂದೂರು ನಾಡು, ಮಂಗಳೂರಿನ ಮುಗುರು ನಾಡುಗಳಲ್ಲದೆ ಸಣ್ಣ ಪ್ರದೇಶಗಳು ಸಾಮಂತ ಅರಸರ ಆಡಳಿತಕ್ಕೆ ಒಳಪಟ್ಟಿದ್ದವು. ವಿಜಯನಗರ

ಕಾಲದ ಶಾಸನಗಳಲ್ಲಿ ವಿವಿಧ ನಾಡುಗಳ ಹೆಸರುಗಳು ಕಂಡುಬರುತ್ತವೆ. ಉದಾಹರಣೆಗೆ ಪಡುವಣ ನಾಡು, ಬೈಂದೂರ ನಾಡು, ಉದಯಂಗಲ ನಾಡು, ತಿಳುಗಾಡಿಯ ನಾಡು, ಕಡಬ ನಾಡು, ನಲ್ವತ್ತು ನಾಡು, ಹಾರುನಾಡು, ಮುಂಗಿನಾಡು, ಮಂಡಲಕೇಯ ನಾಡು, ಕಾಂತಾರದ ನಾಡು, ಕಬುನಾಡು, ಖಾಂಡೆ ನಾಡು, ಹೋರ್‌ನಾಡು, ಹಲಸು ನಾಡು, ಬಂಡಂಪಳ್ಳಿ ನಾಡು ಮುಂತಾದವು.

ಸಾಮ್ರಾಜ್ಯದೊಳಗಡೆ ಎರಡು ನಮೂನೆಯ ಆಡಳಿತ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದುವು. ಬೇರೆ ಬೇರೆ ನೆಲೆಗಳಲ್ಲಿ ಅವುಗಳುತಮ್ಮ ಸಾರ್ವಭೌಮತ್ವವನ್ನು ಪ್ರದರ್ಶಿಸುತ್ತಿದ್ದವು. ಇಲ್ಲಿ ಸಾಮ್ರಾಟನ ಜೊತೆಗೆ ಅಧಿಕಾರ ಹಂಚಿಕೊಂಡಿರುವ ಅನೇಕ ಅಧಿಕಾರಿ ವರ್ಗಗಳು, ಸಂಸ್ಥೆಗಳು, ಮಠ ಮತ್ತು ದೇವಾಲಯಗಳು, ನಗರ ಮತ್ತು ಗ್ರಾಮ ಮಟ್ಟದಲ್ಲಿ ಕಾರ್ಯ ನಿರ್ವಹಿಸಿದ ಅನೇಕ ಘಟಕಗಳು ತುಳುನಾಡಿನ ಸ್ಥಳೀಯ ಆಡಳಿತದಲ್ಲಿ ಸಕ್ರೀಯವಾಗಿದ್ದವು. ಇದು ರಾಜಕೀಯ ವಿಕೇಂದ್ರಿಕರಣವನ್ನು ಸೂಚಿಸುತ್ತದೆ. ಜೊತೆಗೆ ಅಧಿಕಾರ ಪಡೆಯುವ ಪ್ರಕ್ರಿಯೆಯೊಂದಿಗೆ ತುಳುನಾಡಿನಲ್ಲಿ ಅನೇಕ ಭೂಮಾಲೀಕ ವರ್ಗಗಳ ಉಗಮ ಮತ್ತು ಅವುಗಳು ಆರ್ಥಿಕವಾಗಿ ಬಲಿಷ್ಠ ಶಕ್ತಿಯಾಗಿ ಆಯಾಯ ಗ್ರಾಮದಲ್ಲಿ ಗುರುತಿಸಿಕೊಂಡು ಸಾಮ್ರಾಟ ಮತ್ತುರೈತ ಸಮುದಾಯದ ನಡುವೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿರುವುದನ್ನು ಗಮನಿಸಬಹುದು. ಇವರುಗಳೇ ಗ್ರಾಮಾಡಳಿತದಲ್ಲಿ ಪ್ರಭಾವಿಗಳಾಗಿ ನಿರ್ಣಾಯಕ ಪಾತ್ರ ವಹಿಸಿರುವುದು, ಪ್ರಭುತ್ವದ ಅಧೀನಕ್ಕೆ ಒಳಪಟ್ಟಿರುವ ಎಲ್ಲಾ ವರ್ಗಗಳನ್ನು ರಕ್ಷಣೆ ಮಾಡುವುದು ಮತ್ತು ಅವರ ಶ್ರೇಯೋಭಿವೃದ್ಧಿಯು ಸರಕಾರದ ಮೂಲಭೂತ ಕರ್ತವ್ಯವೆಂದು ಸಾಮ್ರಾಟ ಮತ್ತು ಅವನೊಂದಿಗೆ ಕಾರ್ಯನಿರ್ವಹಿಸಿದ ಅಧಿಕಾರಿಗಳು ಮತ್ತು ಸಂಸ್ಥೆಗಳು ಭಾವಿಸಿದ್ದರು. ಆ ಮೂಲಕ ತುಳುನಾಡು ಆಳುಪರ ಕಾಲದಿಂದ ವಿಜಯನಗರ ಅರಸರ ಆಡಳಿತದವರೆಗೆ ಸೌಹಾರ್ದ ಬದುಕನ್ನು ಪ್ರಜೆಗಳು ಕಟ್ಟಿಕೊಳ್ಳಲು ಸ್ಥಳೀಯ ಸಂಸ್ಥೆಗಳು, ಆಡಳಿತ ಘಟಕಗಳು ಮತ್ತು ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

ತುಳುನಾಡಿನ ಗ್ರಾಮೀಣ ವ್ಯವಸ್ಥೆಯಲ್ಲಿ ಕಂಡುಬರುವ ಊಳಿಗಮಾನ್ಯದ ಸ್ವರೂಪದಲ್ಲಿ ಜೈನರು ಮತ್ತು ಬಂಟ ಸಮುದಾಯಗಳ ಸಂಬಂಧಗಳನ್ನು ಗ್ರಹಿಸಬೇಕಾಗುತ್ತದೆ. ಏಕೆಂದರೆ ತುಳುನಾಡಿನಲ್ಲಿ ಪ್ರಮುಖವಾಗಿ ಕಂಡುಬರುವ ಸ್ಥಳೀಯ ಜೈನಅರಸು ಮನೆತನಗಳು ತಮ್ಮ ರಾಜ್ಯಾಡಳಿತವನ್ನು ಆರಂಭಿಸಿದಾಗಿನಿಂದ ಬಂಟ ಜನಾಂಗದೊಡನೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದರ ಬಗ್ಗೆ ಚಾರಿತ್ರಿಕ ದಾಖಲೆಗಳಿವೆ. ಈ ಎರಡೂ ಜನಾಂಗಗಳು ಧಣಿಗಳಾಗಿಯೇ ಇದ್ದು ಕೆಳವರ್ಗದ ಮೇಲೆ ಅಧಿಕಾರ ಚಲಾಯಿಸುತ್ತಿದ್ದವು. ಸಾಮಾಜಿಕ ನಿಯಂತ್ರಣ ಮತ್ತು ನ್ಯಾಯ ನಿರ್ಣಯಗಳು ಇವರಿಂದಲೇ ನಡೆಯುತ್ತಿತ್ತು. ಜೈನ ಆಚರಣೆಗಳು ಮೇಲ್ನೋಟಕ್ಕೆ ವೈದಿಕ ಆಚರಣೆಗಳಂತೆ ಕಂಡುಬಂದರೂ

ಬಂಟರೊಡನೆಯೇ ಇವರ ಹೆಚ್ಚಿನ ಸಂಬಂಧಗಳಿದ್ದವು. ಬಂಟರಗುತ್ತು ಮನೆಗಳಿಗೆ ಎಲ್ಲಿಯವರೆಗೆಅಧಿಕಾರವಿತ್ತೆಂದರೆಜೈನಅರಸರ ಪಟ್ಟಾಭಿಷೇಕ ಸಂದರ್ಭದಲ್ಲಿ ನಾಲ್ಕು ಗುತ್ತುಗಳ ಮುಖಂಡರು ಒಗ್ಗೂಡಿ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿಕೊಡುತ್ತಿದ್ದರು. ಬಂಟ ಸಮುದಾಯವು ಗುತ್ತು ಆಡಳಿತದ ಮೂಲಕವೇ ತುಳುನಾಡಿನ ಹಳ್ಳಿ ಗ್ರಾಮಗಳ ಮೇಲೆ ನಿಯಂತ್ರಣ ಸಾಧಿಸುವಷ್ಟರಮಟ್ಟಿಗೆ ಬೆಳೆದು ಭೂಮಾಲೀಕರಾಗಿ ಕಾಣಿಸಿಕೊಂಡರು. ಬಂಟರು ಜೈನರ ಆಡಳಿತದಲ್ಲಿ ಸೇನಾಧಿಕಾರಿಗಳಾಗಿ ಹಾಗೂ ರಾಜಗುತ್ತಿನವರಾಗಿಯೂ ಎಲ್ಲ ಬಗೆಯ ಅಧಿಕಾರ ಹಾಗೂ ಸವಲತ್ತುಗಳನ್ನು ಪಡೆದುಕೊಂಡಿದ್ದರು.

ಮಧ್ಯಕಾಲೀನ ತುಳುನಾಡಿನ ಊರಾಡಳಿತದಲ್ಲಿ ಜನತಾ ಸಭೆಗಳು ಬಹುಮುಖ್ಯ ಪಾತ್ರ ವಹಿಸಿವೆ. ಪ್ರತಿ ಹಳ್ಳಿ ಗ್ರಾಮಗಳಲ್ಲಿ ಅಂತಹ ಸಭೆಗಳಿದ್ದವೆನ್ನಲು ಆಧಾರಗಳಿವೆ. ಸಂತೆ ಮತ್ತು ಪೇಟೆಗಳ ವ್ಯಾಪಾರಗಳ ಮೇಲಿನ ಸುಂಕವನ್ನು ಆಯಾ ಉಪವಿಭಾಗ ಇಲ್ಲವೇ ಗ್ರಾಮಗಳ ಸುಂಕದ ಅಧಿಕಾರಿಗಳು ಸಂಗ್ರಹಿಸುತ್ತಿದ್ದರು. ಇವರುಅಲ್ಲಿನ ವರ್ತಕರೊಂದಿಗೆ ಸೇರಿಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಸುಂಕದ  ಆಧಾಯವನ್ನು ದಾನಕೊಟ್ಟಿರುವುದು ತಿಳಿದುಬರುತ್ತದೆ.

ಹೆಗ್ಗಡೆಗಳು ಆಳುಪ ರಾಜ್ಯದಲ್ಲಿ ಸ್ಥಳೀಯ ಅಥವಾ ಪ್ರದೇಶಿಕ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದರು. ಆಳುಪ ರಾಜ್ಯದ ಸ್ಥಳೀಯ ಆಡಳಿತದ ಸ್ವರೂಪವನ್ನು ತಿಳಿಯಲು ಲಭ್ಯವಿರುವ ಶಾಸನಗಳಲ್ಲಿ ಹೆಚ್ಚಿನ ಮಾಹಿತಿಗಳಿರುವುದಿಲ್ಲ. ಆದರೆ ಪರೋಕ್ಷವಾಗಿ ಕೆಲವು ಅಂಶಗಳನ್ನು ಗಮನಿಸಬಹುದು. ಮೊದಲನೆ ಚಿತ್ರವಾಹನನ ಕಿಗ್ಗ ಶಾಸನವು ಕಿಲ್ಲದಅಧಿಕಾರಿ ನಾಗಣ್ಣನೆಂದು ಹೇಳುತ್ತದೆ. ಬಂತ್ರ ಶಾಸನವು ಒಂದುಒಪ್ಪಂದದ ಬಗ್ಗೆ ವಿವರ ನೀಡಿ, ಆ ಒಪ್ಪಂದಕ್ಕೆ ಪೆರ್ಗಡೆಗಳು ಸಾಕ್ಷಿಗಳೆಂದು ತಿಳಿಸುತ್ತದೆ. ಈ ಅಧಿಕಾರಿಗಳ ಉಲ್ಲೇಖದ ಸನ್ನಿವೇಶಗಳನ್ನು ಗಮನಿಸಿದರೆ ಅಧಿಕಾರಿ ಮತ್ತು ಪೆರ್ಗಡೆಯು ಗ್ರಾಮಾಧಿಕಾರಿಗಳ ಹುದ್ದೆಗಳ ಹೆಸರುಎಂದು ಹೇಳಬಹುದು. ಬಂತ್ರ ಶಾಸನವು ಆಡಳಿತದಲ್ಲಿ ಸಾಮಾನ್ಯ ಆಡಳಿತಗಾರರ ಪಾತ್ರವನ್ನು ಚಿತ್ರಿಸುತ್ತದೆ. ಸ್ಥಳೀಯ ಅರಸರ ನಡುವೆ ಶಾಂತಿ ಮತ್ತು ಸ್ನೇಹ ಸಂಬಂಧದ ಒಪ್ಪಂದವನ್ನು ತಿಳಿಸುತ್ತಾ ಸದನೂರು ವೈದ್ಯರನ್ನು (ಸಾದನೂರಾ ಮರುಗಲ್),ದೇವಾಲಯದ ಸಂಗೀತಗಾರರು (ಓಲಗದ ಪಾಳಿಯವರು) ಮತ್ತು ಇನ್ನಿತರ ಅಧಿಕಾರಿಗಳನ್ನು ಉಲ್ಲೇಖಿಸುತ್ತದೆ. ಬಾರಕೂರಿನ ಕೋಟೆಕೇರಿಯಲ್ಲಿವ ಕವಿ ಆಳುಪೇಂದ್ರನ ಶಾಸನವು ಅವನು ಬಾರಹಕನ್ಯಾಪುರದ (ಬಾರಕೂರು)ಅರಮನೆಯಿಂದ ರಾಜ್ಯವಾಳುತ್ತಿದ್ದಾಗ ರಾಣಿ ಪಾಂಡ್ಯ ಮಹಾದೇವಿಯ ಪನ್ನೀರ್ಪಳ್ಳಿಯ (ಈಗಿನ ಹನೆಹಳ್ಳಿ ಗ್ರಾಮ) ಆಡಳಿತದ ಉಸ್ತುವಾರಿ ವಹಿಸಿರುವುದನ್ನು ಉಲ್ಲೇಖಿಸಿ ಅವಳ ಆಡಳಿತದಲ್ಲಿ

ಅಧಿಕಾರಿಗಳಾದ ಹೆಗ್ಗಡೆ, ಪ್ರಧಾನ ಮತ್ತು ನಗರ ಸಮೂಹದವರ ಸಕ್ರೀಯ ಪಾಲುಗೊಳ್ಳುವಿಕೆಯನ್ನು ತಿಳಿಸುತ್ತದೆ.

ಮೇಲೆ ಉಲ್ಲೇಖಿಸಲಾದ ಪೆರ್ಗ್ಗಡೆಯರನ್ನು 'ನಾಯಕ' ಮುಂತಾದ ಹೆಸರುಗಳಿಂದಲೂ ಕರೆಯಲಾಗಿದೆ. ಪೆರ್ಗಡೆಗಳು ವಿಭಾಗ ಇಲ್ಲವೆ ಉಪವಿಭಾಗಗಳನ್ನು ಆಳುವ ರಾಜವಂಶೀಯರಂತೆ ವಂಶಪರಂಪರೆಯಾಗಿ ಮುಂದುವರಿಯದೆ ತಮ್ಮ ದಕ್ಷತೆ, ಶೌರ್ಯ, ಸಾಹಸಗಳಿಂದ ಮಾತ್ರ ಅಧಿಕಾರವನ್ನು ಪಡೆಯುತ್ತಿದ್ದರು. ಇಂದಿನ ಹೆಗ್ಗಡೆಗಳೇ ಹಿಂದೆ ಪೆರ್ಗ್ಗಡೆಗಳೆನಿಸಿದ್ದರು.ಅವರಲ್ಲಿ ತಳವೃತ್ತಿ ಹೆಗ್ಗಡೆ, ಸುಂಕವೆರ್ಗ್ಗಡೆ, ಮನೆವೆರ್ಗಡೆ ಮುಂತಾದ ವಿಭಾಗಗಳಿದ್ದುದನ್ನು ಶಾಸನಗಳು ಉಲ್ಲೇಖಿಸಿವೆ. ವೇಣೂರಿನ ಒಂದು ಹಳ್ಳಿಯಲ್ಲಿ ದೊರೆತ 1118ರ ಶಾಸನದಲ್ಲಿ, ಸೇವ್ಯಾಗೆಲ್ಲರಾ ಎಂಬ ಹೆಸರು ಉಲ್ಲೇಖವಾಗಿದ್ದು, ಪೂಂಜಾಲಿಕೆ(ಪೂಜಾಲ್ಕೆ) ಅವನ ರಾಜ್ಯವನ್ನು ಗುರುತಿಸುತ್ತದೆ. ಇದು ಒಂದು ಚಿಕ್ಕ ಆಡಳಿತ ವಿಭಾಗವಾಗಿದ್ದು ಅಲ್ಲಿನ ಅಧಿಕಾರಿ ಆ ರಾಜ್ಯದ ಪ್ರಭುವಿಗೆ ವಿಧೇಯನಾಗಿರುವುದನ್ನು ಸೂಚಿಸುತ್ತದೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರದ ತಲಕಾಡಿನ ಶಾಸನವು, ಆಳುಪರ ವಂಶಸ್ಥನಾದ ಭಂಕಿಯಣ್ಣ ಅರಸನು ನೂರುಂಬಾಡ (ನೂರು ಹಳ್ಳಿಗಳನ್ನೊಳಗೊಂಡ ರಾಜ್ಯ) ವಿಭಾಗವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸುತ್ತದೆ. ಕೋಟದಲ್ಲಿ ದೊರೆತ ಕ್ರಿ.ಶ.1254ರ ವೀರಪಾಂಡ್ಯನ ಪ್ರಥಮ ಶಾಸನವು ದತ್ತಿಯೊಂದನ್ನು ದಾಖಲಿಸುತ್ತಾ 'ಕೋಟದ ಸಾವಿರ' ಮಂದಿ ಮತ್ತು ಮಯ್ದೆವೆರ್ಗಡೆ ಈ ದಾನವನ್ನು ರಾಜ, ಸಮಸ್ತ ಪ್ರಧಾನರು, ಅಳಿಯ ಬಂಕಿದೇವ ಮತ್ತು ಮಯ್ಯುನ ಒಡ್ಡಮದೇವ ಬಲ್ಲವೆರ್ಗ್ಗಡೆ ಇವರ ಸಮಕ್ಷಮ ನೀಡಿದರೆಂದು ಶಾಸನ ತಿಳಿಸುತ್ತದೆ.

ಗ್ರಾಮ ಮತು ್ತ ಊರು ಆಡಳಿತದ ಮೂಲ ಸಂಸ್ಥೆಗಳಾಗಿದ್ದವು. ಈ ಅರ್ಥದಲ್ಲಿ ಆಳುಪ ಕಾಲದ ತುಳುನಾಡನ್ನು ಹಲವು ನಾಡುಗಳನ್ನಾಗಿ ವಿಭಜಿಸಿ, ಅದೇ ನಾಡುಗಳನ್ನು ಗ್ರಾಮ ಹಾಗೂ ಊರುಗಳಾಗಿ, ಆಡಳಿತಾತ್ಮಕ ಅನುಕೂಲಕ್ಕಾಗಿ ವಿಂಗಡಿಸಲಾಗಿತ್ತು. ಆಗ್ರಾಮ ಮತ್ತು ಊರುಗಳನ್ನು ದೊಡ್ಡ ಆಡಳಿತ ವಿಭಾಗವಾಗಿ ಮಾಡುವ ಪದ್ಧತಿಯನ್ನು ಶಾಸನಗಳಲ್ಲಿ ಉಲ್ಲೇಖವಾಗಿರುವ ಹೆಸರುಗಳಿಂದಲೇ ಅರ್ಥಮಾಡಿಕೊಳ್ಳಬಹುದು. ಉದಾ:ಮೂರು ಗ್ರಾಮ, ನಾಲ್ಕೂರು, ಐದೂರು, ಪನ್ನೀರ್ ಪಳ್ಳಿ ಎಂಬ ಹೆಸರು. ಗ್ರಾಮಗಳು ಮತ್ತು ಊರುಗಳು ಸ್ಥಳೀಯ ಆಡಳಿತದಲ್ಲಿ ಬಹಳ ಪ್ರಾಮುಖ್ಯವಾಗಿದ್ದು, ಅವುಗಳು ಸ್ವಯಂ ಅಧಿಕಾರವನ್ನು ಹೊಂದಿರುವುದನ್ನು ಅನೇಕ ಶಾಸನಗಳಿಂದ ರುಜುವಾತು ಮಾಡಬಹುದು. ಹೀಗೆ ಆಡಳಿತದ ಸಮರ್ಥ ನಿರ್ವಹಣೆಗಾಗಿ ಪ್ರಾಚೀನ ಭಾರತ ಹಾಗೂ ಕರ್ನಾಟಕದಲ್ಲಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡುವ ಪದ್ದತಿಯು ಸಾಮಾನ್ಯವಾಗಿತ್ತು. ಅದು ಕೇಂದ್ರಾಡಳಿತ, ಪ್ರಾಂತ್ಯಾಡಳಿತ,

ನಾಡಾಡಳಿತ ಮತ್ತು ಊರಾಡಳಿತ ಎಂದು ಸ್ಥೂಲವಾಗಿ ನಾಲ್ಕು ತೆರನಾಗಿದ್ದುದನ್ನು ಶಾಸನಗಳಲ್ಲಿ ಕಾಣಬಹುದು.

ಗ್ರಾಮದ ಮುಖಂಡನನ್ನು ಒಡೆಯ ಎಂದೂ ಸಹ ಕರೆಯಲಾಗುತ್ತಿತ್ತು. ಉಡುಪಿ ತಾಲೂಕಿನ ಪುತ್ತಿಗೆಯ ಕ್ರಿ.ಶ.1267ರ ಶಾಸನವು ಪುತ್ತಿಗೆ ಗ್ರಾಮೊಡೆಯ ಎಂದು ಉಲ್ಲೇಖಿಸುತ್ತದೆ. ಗ್ರಾಮೀಣಿಯ ಕರ್ತವ್ಯಗಳನ್ನು ಆಳುಪ ಶಾಸನಗಳು ತಿಳಿಸುವುದಿಲ್ಲವಾದರೂ ಹೆಸರೇ ಸೂಚಿಸುವಂತೆ ಗ್ರಾಮೀಣಿಯು ಗ್ರಾಮಾಡಳಿತದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದನ್ನಲ್ಲದೇ, ಆಯಾಯ ಗ್ರಾಮಗಳಲ್ಲಿ ಕೊಟ್ಟ ಭೂದತ್ತಿಯ ಸಂರಕ್ಷಕನಾಗಿರುತ್ತಿದ್ದನು. ಗ್ರಾಮೀಣಿಯ ಜೊತೆ ಸೇನಭೋವ ಗ್ರಾಮದ ಕರಣಿಕ ಇರುತ್ತದ್ದರು.

ಆಡಳಿತದ ಅನುಕೂಲಕ್ಕಾಗಿ ಗ್ರಾಮಾಡಳಿತವು ಗ್ರಾಮದ ಮುಖಂಡರ ಅಥವಾ ಗುತ್ತಿನ ಮನೆಗಳ ಯಜಮಾನರ ಸಭೆಯನ್ನು ರಚಿಸಿಕೊಳ್ಳುತ್ತಿತ್ತು. ಎರಡನೇ ಆಳುಪರಸನ ಉದ್ಯಾವರದ ಶಾಸನದಲ್ಲಿ ಶಿವಳ್ಳಿ–1000 (ಶಿವಳ್ಳಿಯ ಸಾಸೀರ್ವರು) ಎಂದು ದಾಖಲಿಸಿದೆ. ಮಧ್ಯಯುಗ ಮತ್ತು ನಂತರದ ಆಳುಪರ ಶಾಸನಗಳಲ್ಲಿ ಹಂದಾಡಿ ಮತ್ತು ಕೋಟ ಸಾವಿರ, ನೀರುವರ ಮತು್ತ ಕುಡಿಕೂರ 300 ಮತ್ತು ಬ್ರಹ್ಮಾವರ 100 ಮತ್ತು ಶಿವಪುರ 200 ಎಂದು ಉಲ್ಲೇಖವಿದೆ.

ವಿಜಯನಗರ ಕಾಲದ ತುಳುನಾಡಿನ ಶಾಸನಗಳಲ್ಲಿ ಆಡಳಿತ ವಿಭಾಗಗಳಿಗೆ ಸಂಬಂಧಪಟ್ಟ ದೇಶ, ರಾಜ್ಯ, ಮಂಡಲ, ಮಾಗಣಿ, ಸ್ಥಳ, ಸೀಮೆ, ನಾಡು, ಗ್ರಾಮ, ಗ್ರಾಮಚಾವಡಿ, ಊರು,ಗುತ್ತು ಮುಂತಾದ ಉಲ್ಲೇಖಗಳಿವೆ. ಸಾಮಾನ್ಯವಾಗಿ ದೇಶ, ರಾಜ್ಯ, ಮಂಡಲ, ಸ್ಥಳ ಮತ್ತು ನಾಡು ಎಂಬ ಪದಗಳನ್ನು ಒಂದೇ ಅರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ.

ಕೆಲವೊಮ್ಮೆ ಗುತ್ತು (ಗ್ರಾಮದ ಮತ್ತೊಂದು ಸಣ್ಣ ಆಡಳಿತದ ವಿಭಾಗ) ಎಂಬ ಶಬ್ಧವನ್ನು ಸ್ಥಳಕ್ಕೆ ಬಳಸಲಾಗಿತ್ತು. ಮರಕಟ ಸ್ಥಳವು ಮೀಜಾರು ಮಾಗಣೆಯ ಗುತ್ತು ಆಗಿತ್ತು ಎಂದು ಒಂದುದತ್ತಿ ಶಾಸನದಲ್ಲಿ ಉಲ್ಲೇಖವಿದೆ. ಗುತ್ತು ಎಂಬುದು ತುಳುನಾಡಿನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಮೂಲ ಘಟಕವಾಗಿದೆ. ಆಡಳಿತದಲ್ಲಿ ಹಾಗೂ ಆರ್ಥಿಕವಾಗಿ ಪ್ರಾಮುಖ್ಯ ಪಾತ್ರ ವಹಿಸಿದೆ. ವಿಜಯನಗರ ಕಾಲದ ಕೊನೆಯಲ್ಲಿ ಈ ಪದದ ಬಳಕೆಯಾಗಿದೆ. ಒಂದು ಊರಿನಲ್ಲಿ ಸಾಮಾನ್ಯವಾಗಿ ಒಂದರಿಂದ ನಾಲ್ಕು ಗುತ್ತುಗಳು ಕಂಡುಬರುತ್ತವೆ. ಗಣಪತಿರಾವ್‌ಗಳವರು ತಮ್ಮ'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಎಂಬ ಕೃತಿಯಲ್ಲಿ ಮುಖ್ಯವಾದ ಕೆಲವು ಗುತ್ತುಗಳನ್ನು ಗುರುತಿಸಿದ್ದಾರೆ. ಗುತ್ತು ಸಾಮಾನ್ಯವಾಗಿ ಒಬ್ಬ ಯಜಮಾನ/ಭೂಒಡೆಯನ ಜಮೀನಿನಲ್ಲಿ ಕಟ್ಟಿರುವ ದೊಡ್ಡಮನೆ ಮತು್ತ ಅದನ್ನು ಸುತ್ತುವರಿದ ಕೃಷಿ

ಜಮೀನು. ತುಳುನಾಡಿನ ಗುತ್ತುವನ್ನು ಕನ್ನಡ ಶಾಸನಗಳಲ್ಲಿ ಬರುವ ಗುತ್ತಿಗೆ ಎಂಬ ಪದಕ್ಕೆ ಸಂಬಂಧಿಸಿರಬಹುದೆಂದು ಅಭಿಪ್ರಾಯವಿದೆ. ದೊಡ್ಡ/ಹಿರಿಮನೆ ಮತ್ತು ಜಮೀನಿನ ಒಡೆಯನಾದ ಗುತ್ತೆದಾರ/ಗುತ್ತಿಗೆದಾರ ರಾಜನ ಆಸ್ಥಾನದ ಖಜಾನೆಗೆ ಕಂದಾಯವನ್ನು ಸಲ್ಲಿಸುವ ಹೊಣೆಗಾರಿಕೆ ಹೊಂದಿದ್ದು,ಉತ್ಪತ್ತಿಯ ಪ್ರಮಾಣವನ್ನು ಆಧರಿಸಿ ಕಂದಾಯದದರವನ್ನು ನಿಗಧಿಪಡಿಸಲಾಗುತ್ತಿತ್ತು. ಇದು ಊಳಿಗಮಾನ್ಯ ಪದ್ಧತಿಯನ್ನು ನೆನಪಿಸುತ್ತದೆಯಲ್ಲದೆ ಗುತ್ತೇದಾರನು ಯುದ್ದದ ಸಮಯದಲ್ಲಿ ತನ್ನ ಒಡೆಯನಿಗೆ ಸಂಪನ್ಮೂಲ ಹಾಗೂ ಸೈನ್ಯವನ್ನು ಒದಗಿಸಲು ಜನರಿಂದ ವಿಶೇಷ ಕಂದಾಯ/ಕರವನ್ನು ವಸೂಲು ಮಾಡುವ ಹಕ್ಕು ಹೊಂದಿದ್ದನು. ಶಾಸನಗಳಲ್ಲಿ ಬಲಿಯಂತೂರುಗುತ್ತು, ಬಾಗಿಲರಸರಗುತ್ತು, ಮರಕಟ್ಟಗುತ್ತು, ಕುಂಟವಗುತ್ತು, ಆನಂತ ಭಂಡಾರಿಗುತ್ತು, ಮೂಲಕಾಯಗುತ್ತು ಮತ್ತು ವಾಸೆಯಗುತ್ತು, ಚೆಟ್ಟಸಗುತ್ತುಗಳ ಬಗ್ಗೆ ಉಲ್ಲೇಖಗಳಿವೆ.

ಶಾಸನಗಳಲ್ಲಿ ಚಾವಡಿ ಎಂಬ ಪದದ ಬಳಕೆಯೂ ಇದೆ. ಚಾವಡಿ ಪದದ ನಿಜವಾದ ಅರ್ಥ ಆಡಳಿತ ಕಛೇರಿ. ಗ್ರಾಮಗಳ ಜನರು ಸಭೆ ಸೇರುವ ಸ್ಥಳಕ್ಕೆ ಚಾವಡಿ ಎಂದರ್ಥ. ಈ ನಿಟ್ಟಿನಲ್ಲಿ ಬಾರಕೂರುಚಾವಡಿಗೆ ವಿಶೇಷ ಅರ್ಥ ಬರುತ್ತದೆ. ಕ್ರಿ.ಶ.1427ರ ಕಾಯ್ಕಿಣಿ ಶಾಸನದಲ್ಲಿ ಹೊನ್ನಾವರದ ಮೂರು ಚಾವಡಿಗಳ ಬಗ್ಗೆ ವಿವರಣೆಇದೆ

ಸಂಕೀರ್ಣ ಸ್ವರೂಪದ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳು ತುಳುನಾಡಿನ ಹಲವು ಗ್ರಾಮಗಳಲ್ಲಿ ಇಂದಿಗೂ ಕಂಡುಬರುತ್ತವೆ. ತುಳುನಾಡಿನ ಗ್ರಾಮೀಣ ಸಮಾಜದಲ್ಲಿ ಕಂಡುಬರುವ ಗುತ್ತಿನ ಮನೆಯಯ ಜಮಾನರ ಸ್ಥಾನಮಾನವನ್ನು ಅವರ ಕೃಷಿ ಜಮೀನುಗಳ ಪ್ರಮಾಣದ ಆಧಾರದ ಮೇಲೆ ಅಳೆಯುವುದು ಸಮ್ಮತವಲ್ಲ. ಏಕೆಂದರೆ ತುಳುನಾಡಿನಲ್ಲಿ ಅತ್ಯಂತ ಚಿಕ್ಕಕ್ಷೇತ್ರದ ಒಡೆಯನೂ ಹೆಚ್ಚು ಕಡಿಮೆ ಸಾರ್ವಭೌಮನೆಂದೇ ಪರಿಗಣಿತನಾಗಿದ್ದಾನೆ. ಆತನ ಜಮೀನಿನ ಒಕ್ಕಲುಗಳು ಅವನ ಪ್ರಜೆಗಳು. ಒಕ್ಕಲುಗಳು ಆತನಿಗೆ ಗೇಣಿಕೊಡಬೇಕಾಗಿದ್ದಿಲ್ಲ. ಬದಲಾಗಿ ಆತನಿಗೆ ನಿಷ್ಠೆ ಹಾಗೂ ಕಾಣಿಕೆಗಳನ್ನು ಸಲ್ಲಿಸಬೇಕಾಗುತ್ತದೆ. ಅವರನ್ನು ಪ್ರಜೆಗಳು ಎನ್ನುವುದಕ್ಕಿಂತ ಅವನ ಆಶ್ರಿತರು ಎನ್ನುವುದು ಹೆಚ್ಚು ಸಮಂಜಸ.

ಸಾಮ್ರಾಟನಲ್ಲಿ ತನ್ನ ನಿಜವಾದ ಸಾರ್ವಭೌಮತ್ವವನ್ನು ಹೊಂದಿದ್ದು, ಇತರ ಭಾಗಗಳಲ್ಲಿ ಅಂದರೆ ಪ್ರಾಂತಗಳಲ್ಲಿ ಸಾಮಂತರು ತಮ್ಮದೇ ಆಧಿಕಾರವನ್ನು ಚಲಾಯಿಸಿ ಅರಸನಿಗೆ ವಿಧೇಯರಾಗಿದ್ದರು. ಅಂತೆಯೇ ಅನೇಕ ಸ್ಥಾನಿಕ ಆಡಳಿತ ಘಟಕಗಳಾದ ನಾಡು, ಅಗ್ರಹಾರ, ದೇವಾಲಯ, ಮಠ, ವ್ಯಾಪಾರೀ ಶ್ರೇಣಿಇತ್ಯಾದಿ ಕೂಡ ಸ್ವತಂತ್ರವಾಗಿದ್ದು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ನೀತಿನಿಯಮಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರ ಹೊಂದಿದ್ದವು. ಈ ವಲಯಗಳು ಕೂಡ ತಮ್ಮಷ್ಟಕ್ಕೆ ಸಾರ್ವಭೌಮತ್ವವನ್ನು ಹೊಂದಿದ್ದವು

ಮಧ್ಯಯುಗೀನ ತುಳುನಾಡಿನ ಗ್ರಾಮಗಳಲ್ಲಿ ಭೂಮಾಲೀಕರು ಮತ್ತು ದೇವಸ್ಥಾನಗಳಲ್ಲಿ ಪೂಜೆ ಮಾಡುವ ಬ್ರಾಹ್ಮಣರಾದ ಪ್ರಮುಖರಾಗಿದ್ದರು. ದೇವಾದಾಯ ಹಾಗೂ ಬ್ರಹ್ಮದಾಯದತ್ತಿ ಭೂಮಿಗಳನ್ನು ಬ್ರಾಹ್ಮಣರಾದ ಮಹಜನರೆಂಬ ನಿರ್ವಹಣಾ ವ್ಯವಸ್ಥೆಯನ್ನು ನಿಯಂತ್ರಿಸುವುದರೊಂದಿಗೆ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯಲ್ಲಿ ಪ್ರಭಾವ ಬೀರಿದ್ದರು. ಮೇಲಿನ ಆಡಳಿತ ವರ್ಗ ಬ್ರಾಹ್ಮಣರನ್ನು ಗಂಭೀರವಾಗಿ ಪರಿಗಣಿಸಿತ್ತು. ಎಕೆಂದರೆ ಬ್ರಾಹ್ಮಣರು ರಾಜಕೀಯ ಮತ್ತು ಧಾರ್ಮಿಕ ನಿಯಂತ್ರಣ ಶಕ್ತಿಯಾಗಿ ದೇವಸ್ಥಾನಗಳು ಮತ್ತು ಕೃಷಿ ಭೂಮಿಯ ನಿರ್ವಹಣೆಯಲ್ಲಿ ಪ್ರಮುಖ ಪಾತ್ರದೊಂದಿಗೆ ರಾಜನಿಗೆ ರಾಜಾಡಳಿತದಲ್ಲಿ ನೆರವಾಗುತ್ತಿದ್ದರು. ಬ್ರಾಹ್ಮಣರು ಮತ್ತು ಅಗ್ರಹಾರಗಳ ಪ್ರಭಾವದಿಂದ ದೇವಸ್ಥಾನಗಳ ದಾನದತ್ತಿಗಳು ಆಧಿಕವಾಗಿ ನಂತರದ ಕಾಲಘಟ್ಟದಲಿ ್ಲದೇವಸ್ಥಾನ ನಿರ್ವಹಣೆ ಮತ್ತು ಪೋಷಣೆಯನ್ನು ರಾಜ ಸಾಮಂತರು ಮುಂದುವರಿಸಿಕೊಂಡು ಬಂದದ್ದು ವಿಶೇಷವಾಗಿತ್ತು. ಇದರಿಂದ ಗ್ರಾಮಗಳು ತಮ್ಮದೆಯಾದರೀತಿಯಲ್ಲಿ ಪ್ರಗತಿ ಸಾಧಿಸುತ್ತಿದ್ದುದು ಬಹಳ ಗಮನಾರ್ಹ. ಇದು ಗ್ರಾಮದ ಪ್ರಗತಿ ಮತ್ತು ಹಳ್ಳಿಗಾಡಿನ ಜನಜೀವನದ ಮಹತ್ತರ ಬದಲಾವಣೆಗೆ ಸಾಕ್ಷಿಯಾಗಿದೆ. ಹೀಗೆ ಹಳ್ಳಿಗಳ ಭೂಮಾಲೀಕರು ಕೃಷಿ ನೆಲೆಗಳ ವಿಸ್ತರಣೆ ಹಾಗೂ ಕೃಷಿ ಚಟುವಟಿಕೆಗಳ ಹೆಚ್ಚಳದೊಂದಿಗೆ ರಾಜನ ಕುಟುಂಬದೊಂದಿಗೆ ಅನ್ಯೋನ ಸಂಬಂಧವನ್ನು ಹೊಂದಿದ್ದರು. ಇದರಿಂದ ರಾಜನು ಉತ್ಪಾದನಾ ವಲಯಗಳು ಮತ್ತು ಜನರ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ಇದು ರಾಜ್ಯದ ಆರ್ಥಿಕಾಭಿವೃದ್ಧಿ ಮತ್ತು ಆಡಳಿತಕ್ಕೆ ಪ್ರಮುಖ ಮಾನದಂಡವಾಯಿತು ಹಾಗೂ ಆರ್ಥಿಕ ಚಟುವಟಿಕೆಗಳನ್ನು ಮೌಲ್ಯೀಕರಿಸುವ ಆಳತೆ ಗೋಲಾಯಿತು ಎಂಬುದು ಸ್ಪಷ್ಟವಾದ ಮಾಹಿತಿಯನ್ನು ಆಧರಿಸಿದೆ.

## ಪರಾಮರ್ಶನ ಗ್ರಂಥಗಳು


- Francis Buchanan,1870, A Journey from Madras through the countries of Mysore, Canara and Malabar, Madras
- John Sturrock, 1894, Madras District Manuals, South Canara, 2 Volumes, Madras.
- Burnel, 1888, The Devil Worship of the Tuluvas, Published by R.C, Temple. Madras
- John Sturrock, 1894,Madras District Manuals, South Canara, 2 Volumes, Madras.
- D.D.Kosambi , 1970, The Culture and Civilization in Historical Outline, Delhi.
- R.S.Sharma, 1987, Indian Feudalism, Delhi.
- ಚಿದಾನಂದ ಮೂರ್ತಿ, 1979, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು.
- ಮೋಹನ್‌ಕೃಷ್ಣರೈ, 2015, ತುಳುಸಂಸ್ಕೃತಿ ಚತುರ್ಮುಖಿ ಅಧ್ಯಯನ, ಹಂಪಿ.
- ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿ, ಮಂಗಳೂರು. & ಮೋಹನ್‌ಕೃಷ್ಣರೈ, 1999, ತುಳು ಸಂಸ್ಕೃತಿ, ಹಂಪಿ.
- ಬಿ.ಎಸ್. ಭಂಡಾರಿ 1996, ದಕ್ಷಿಣ ಕನ್ನಡ ಜಿಲ್ಲೆಯ ಬಂಟರಯಾನೆ ನಾಡವರ